ತುಮಕೂರು ಜಿಲ್ಲೆ ಭೈರೇನಹಳ್ಳಿಯ ಡಾ. ನಾಗರಾಜು ಜಿ.ಬಿ. ರೈತ ಕುಟುಂಬದಲ್ಲಿ ಬೆಳೆದು, ವೈದ್ಯರಾದವರು. ಪ್ರಸ್ತುತ ಒಮಾನ್ ದೇಶದ ಮಸ್ಕತ್‌ನಲ್ಲಿ ಹೃದಯರೋಗ ತಜ್ಞರು. ಸಾಹಿತ್ಯದ ಹೃದಯಪರೀಕ್ಷೆ ಅವರಿಗೆ ಸಂತೋಷ ಕೊಡುವ ಸಂಗತಿಗಳಲ್ಲೊಂದು. 'ಬೆಂಬಿಡದ ಗುಂಗು' ಕವನ ಸಂಕಲನ ಹಾಗೂ 'ಮಾಯಾಜಿಂಕೆ' ಕಾದಂಬರಿ ಪ್ರಕಟಿತ ಕೃತಿಗಳು. 'ಗಾಂಧಿವಾದಿಯ ಹಳೆಯ ಟ್ರಂಕ್' ಮೂಲಕ 'ಮಯೂರ' ಲೇಖಕಬಳಗಕ್ಕೆ ಸೇರ್ಪಡೆಯಾಗುತ್ತಿದ್ದಾರೆ.



ಗಹಗಹಿಸಿ ನಗತೊಡಗಿದ. ಅವನ ಮಾತಿನ ಆರ್ಭಟ ಮೈಕ್ ಇಲ್ಲದಿದ್ದರೂ ಎಲ್ಲರ ಕಿವಿಗೂ ತಲುಪಿತ್ತು. ಅಧ್ಯಕ್ಷರಾದಿಯಾಗಿ ಯಾರಿಗೂ ಏನೂ ಮಾಡಲು ತೋಚಲಿಲ್ಲ, ತೋಚಿದರೂ ಅವನನ್ನು ಯಾರೂ ಏನೂ ಅನ್ನುವಂತಿರಲಿಲ್ಲ. ಏಕೆಂದರೆ ಯರ್ರಿಸ್ವಾಮಿಯನ್ನು ಎದುರು ಹಾಕಿಕೊಂಡ್ರೆ ಮುಗಿಯಿತು. ಒಂದು ಕ್ವಾರ್ಟರ್ ಹಾಕಿಕೊಂಡು ಬಂದು ಎದುರಾಳಿಗಳ ಜನ್ಮ ಜಾಲಾಡುತ್ತಿದ್ದ. 'ಕುಡುಕನ ಸಾವಾಸ ನಮಗ್ಯಾಕೆ' ಎಂದು ಎಲ್ಲರೂ ಸುಮ್ಮನಿದ್ದರು. ಅವನೇನು ಯಾರನ್ನೂ ಸುಮ್ಮನೆ ಬಯ್ಯುತ್ತಿರಲಿಲ್ಲ, ತಪ್ಪು ಮಾಡಿದವರನ್ನು ಮಾತ್ರ ಬಿಡದೆ ಅವರ ಮರ್ಮಕ್ಕೆ ತಾಗುವಂತೆ ಉಗಿದು, ಅವರ ಮರ್ಯಾದೆಯನ್ನು ಮೂರುಕಾಸಿಗೆ ಹರಾಜು ಹಾಕುತ್ತಿದ್ದನಾದ್ದರಿಂದ, ಯಾರಿಗೂ ಅವನನ್ನು ಎದುರು ಹಾಕಿಕೊಳ್ಳುವ ನೈತಿಕತೆ ಇರಲಿಲ್ಲ. ಏಕೆಂದರೆ ಆತ ಕುಡಿದು ಬಂದಾಗ ಸತ್ಯವನ್ನು ಹೇಳುತ್ತಿದ್ದ ಎಂದು ಎಲ್ಲರಿಗೂ ಗೊತ್ತಿತ್ತು. 'ಯರ್ರಿಸ್ವಾಮಿ ಬಾರಪ್ಪಾ, ಆಮೇಲೆ ಮಾತನಾಡೋಣ' ಎನ್ನುತ್ತಾ ಕೆಲವರು ಅವನನ್ನು ವಿನಯದಿಂದ ಮಾತನಾಡಿಸುತ್ತಾ ಉಪಾಯದಿಂದ ಕರೆದುಕೊಂಡು ಹೋಗುವುದರೊಳಗಾಗಿ, 'ಯಾವ್ದೇ ಕಾರಣಕ್ಕೂ ತಮ್ಮೇಗೌಡನ ಹೆಸರು ಊರಿಗೆ ಇಡಬೇಡ್ರೀ. ಅವನಷ್ಟು ಮಿಂಡ್ರಿ ನಮ್ಮ ಸುತ್ತಮುತ್ತಲಿನ ಊರಲ್ಲಿ ಯಾರೂ ಇಲ್ಲ...' ಎಂದು ಕೂಗುತ್ತಾ ಹೋದ.

ಸಭೆಯು ಮುಗಿಯುತ್ತಿದ್ದಂತೆ ಭೋಜೇಗೌಡನು ತಮ್ಮ ಹಿಂಬಾಲಕರ ಜೊತೆ ಮನೆಯ ಕಡೆ ಹೆಜ್ಜೆ ಹಾಕಿದ. ಮನೆಯಲ್ಲಿ ಎರಡು ಪೆಗ್ಗು ಹಾಕುತ್ತಾ ಆನಂದಪ್ಪನು, 'ಅಲ್ರೀ ಅಧ್ಯಕ್ಷರೇ, ನಿಮ್ಮ ಮಾತು ಕೇಳಿ ನಮಗೆಲ್ಲಾ ನಿಜಕ್ಕೂ ಆಶ್ಚರ್ಯ ಆಯ್ತು. ಇವತ್ತೇ ನಿಮ್ಮ ಅಪ್ಪಾಜಿ ಹೆಸರನ್ನು ಫೈನಲ್ ಮಾಡೋದು ಬಿಟ್ಟು, ನೀವೊಳ್ಳೆ ಪ್ರಜಾಪ್ರಭುತ್ವ, ಸ್ವಜನ ಪಕ್ಷಪಾತ ಅಂತ ಒಳ್ಳೇ ಗಾಂಧೀಜಿ ತರ ಮಾತಾಡಿ, ಶ್ರೀನಿವಾಸರಾಯರ ಹೆಸರು ಮೇಲಕ್ಕೆ ಬರೋಹಾಗೆ ಮಾಡಿದ್ರಿ. ಜನ ನಿಮ್ಮ ಅಪ್ಪನವರ ಹೆಸರು ಒಪ್ತಾರಾ? ಈಗ ನೋಡಿ ಆ ಕುಡುಕ ಸೂಳೆಮಗ ಯರ್ರಿಸ್ವಾಮಿ, ದೇವ್ರಂತಹ ನಿಮ್ಮ ಅಪ್ಪನವರನ್ನ ಮಿಂಡ್ರಿ ಅಂತಾನಲ್ಲಾ, ಅವನಿಗೆ ಎಷ್ಟು ಕೊಬ್ಬು ಇರಬೇಕು? ನೀವ್ಯಾಕೆ ಶ್ರೀನಿವಾಸರಾಯರ ಹೆಸರು ಹೇಳಿದ್ದು? ನಮಗಂತೂ ಒಂದೂ ಅರ್ಥವಾಗಲಿಲ್ಲ' ಎಂದ. ಏನೂ ಉತ್ತರಿಸದೆ ಭೋಜೇಗೌಡನು ಮೀಸೆಯ ಅಡಿಯಲ್ಲಿ ಸಣ್ಣಗೆ ಮುಗುಳ್ನಕ್ಕು, 'ಆನಂದಪ್ಪನಿಗೆ ಇನ್ನೊಂದು ಪೆಗ್ಗು ಹಾಕ್ರೋ' ಎಂದ.

ಭೋಜೇಗೌಡನು ಮಾತು ಕಡಿಮೆ, ಕೆಲಸ ಜಾಸ್ತಿ ಪಂಕ್ತಿಗೆ ಸೇರಿದವನು. ಜೋಯಿಸರು, 'ಅದಕ್ಕೆ ಆನಂದಪ್ಪ ನಿನಗೆ ರಾಜಕೀಯ ಅರ್ಥ ಆಗೋಲ್ಲ ಅಂತ ಹೇಳಿದ್ದು. ಜನರಿಗೆಲ್ಲಾ ಶ್ರೀನಿವಾಸರಾಯರ ಮೇಲೆ ಪ್ರೀತಿ ಜಾಸ್ತಿ, ಅದಕ್ಕೆ ನಿಮ್ಮೊಂದಿಗೆ ನಾನೂ ಇದ್ದೀನಿ ಎಂದು ತೋರಿಸಲು ನಮ್ಮ ಗೌಡ್ರು ಶ್ರೀನಿವಾಸರಾಯರ ಹೆಸ್ರನ್ನು ಮುನ್ನಲೆಗೆ ತಂದಿದ್ದಾರೆ. ಜನರಿಗೆ ಅಷ್ಟಾಗಿ ಇಷ್ಟ ಇಲ್ಲದಿರೋ ತಮ್ಮ ತಂದೆಯವರ ಹೆಸರನ್ನ ಸ್ವಲ್ಪ ಕೆಳಗೆ ಇಟ್ಟಿದ್ದಾರೆ. ಟಗರು ಶತ್ರುವನ್ನ ಗುದ್ದೋಕೆ ಮುಂಚೆ ಎರಡು ಹೆಜ್ಜೆ ಹಿಂದೆ ಹೋಗುತ್ತಲ್ಲಾ, ಅದೇ ರೀತಿ ನಮ್ಮ ಅಧ್ಯಕ್ಷರೂ ಕೂಡ. ತಮ್ಮ ತಂದೆಯವರ ಹೆಸರು ಇವರೇ ಸೂಚಿಸಿದ್ರೆ ಜನರಿಗೆ ಕಸಿವಿಸಿಯಾಗ್ತದೆ, ಜನ ವಿರೋಧಿಸ್ತಾರೆ. ಹಾಗಾಗಿ ಜನಗಳಿಗೆ ನಂಬಿಸೋಕೆ ಅವರೆಲ್ಲರ ಇಚ್ಛೆಯಂತೆ ಶ್ರೀನಿವಾಸರಾಯರ ಹೆಸರನ್ನು ಮುಂದೆ ತಂದಿದ್ದಾರೆ. ಇನ್ನೂ ಒಂದು ವಾರ ಇದೆಯಲ್ಲ, ಅಷ್ಟರಲ್ಲಿ ಇಬ್ಬರ ನಡುವೆ ತುಲನೆ ಮಾಡಿ ಒಂದು ಹೆಸರು ನೀವೇ ಆಯ್ಕೆ ಮಾಡಿ ಅಂತ ಜನರಿಗೇ ತೀರ್ಮಾನ ಮಾಡಲು ಬಿಟ್ಟಿದ್ದಾರೆ. ಇನ್ನೊಂದು ವಾರದಲ್ಲಿ ತಮ್ಮೇಗೌಡರ ತೂಕ ಹೇಗೆ